ಭಾಷಣಕ್ಕೆ ಕಾದಿದ್ದಾರೆ. ಅವರಿಗೆ ಅನ್ಯಾಯವಾಗಬಾರದು ಎಂದು ತಾಳ್ಮೆ ವಹಿಸಿದೆ. ಮುಂಗಾರಿನ ದಿನಗಳವು. ಆಗಸವನ್ನು ಕಪ್ಪು ಮೋಡಗಳು ಆವರಿಸುತ್ತ ಬೆಳಕು ಮಂದವಾಗುತ್ತಿತ್ತು. ರಸ್ತೆಪಕ್ಕದ ಜೋಳದ ಕೊಯಿಲು ಮುಗಿಸಿದ ಹೊಲದಲ್ಲಿ ಹಾಕಿದ ಪೆಂಡಾಲಿನಲ್ಲಿ ಕಾರ್ಯಕ್ರಮ. ಅರ್ಧ ಊರೇ ವೇದಿಕೆಯಲ್ಲಿ ಆಸೀನವಾಯಿತು. ಭಾಷಣಕಾರರಿಗೆ ನಾನು ಬರದಿದ್ದರೆ ಯಾವ ವ್ಯತ್ಯಾಸವೂ ಆಗುತ್ತಿರಲಿಲ್ಲ ಎಂಬ ಜ್ಞಾನೋದಯ ಕೊಡುವಷ್ಟು ವೇದನೆ ಮತ್ತ್ಯಾವುದೂ ಇಲ್ಲ. ನನ್ನನ್ನು ಕರೆಯಬಹುದು ಎಂದು ಗುರುಗಳ ಮುಖವನ್ನೇ ಮಿಕಮಿಕ ನೋಡುತ್ತಿದ್ದೆ. ಲಗೇಜು ಸಮೇತ ಬಸ್ಸುನಿಲ್ದಾಣದಲ್ಲಿ ಕೂತ ಪ್ಯಾಸೆಂಜರಿನಂತಿದ್ದ ನನ್ನನ್ನು ಕಂಡು ಗುರುಗಳು ಕಾಯುವಂತೆ ಕೈಸನ್ನೆ ಮಾಡಿದರು. ಗುರುವಂದನೆ ಶುರುವಾಗಿ ಕಾಣಿಕೆಗಳ ಸುರಿಮಳೆಯಾಯಿತು. ಅದರೊಟ್ಟಿಗೇ ಪೆಂಡಾಲು ಗಾಳಿಗೆ ಹೊಯ್ದಾಡತೊಡಗಿತು. ಹುಚ್ಚುಮಳೆ ಎಲ್ಲಿತ್ತೊ ಏನೊ? ಶಾಮಿಯಾನ ನೀರುತುಂಬಿದ ಜರಡಿಯಾಯಿತು. ಜನ ಸಿಕ್ಕಲ್ಲಿ ಓಡಿದರು. ಗುರುಗಳನ್ನು ಮಂತ್ರಿಗಳು ಕಾರಿನಲ್ಲಿ ಕೂರಿಸಿಕೊಂಡು ರಕ್ಷಿಸಿದರು. ಮಳೆಯಿಂದ ತಪ್ಪಿಸಿಕೊಳ್ಳಲು ಆಸರೆ ಕಾಣಲಿಲ್ಲ. ನನ್ನ ಬಳಿಕ ಪ್ರವಚನ ಕೊಡಲಿದ್ದ ಸ್ಥಳೀಯ ಪಂಡಿತರೊಬ್ಬರು ಪ್ಲಾಸ್ಟಿಕ್ ಚೇರನ್ನೇ ಛತ್ರಿಯನ್ನಾಗಿ ಮಾಡಿ ನನಗೊಂದು ಕೊಟ್ಟು ತಾವೊಂದು ಇಟ್ಟುಕೊಂಡು, 'ಸಾಹೇಬರೆ ಎಂಥಾ ಕೆಲಸಾತು. ನಿಮ್ಮ ಭಾಷಣ ಆಗಲಿಲ್ಲ. ಮಲೆನಾಡಿನ ಮಂದಿ ನೀವು. ಮಳೀ ತಂದೀರಿ. ನಿಮಗೆ ಹೆಂಗ ಧನ್ಯವಾದ ಹೇಳಬೇಕೊ ತಿಳಿವಲ್ಲದು. ರೈತರು ಕಾಯ್ತಾ ಇದ್ರು ಬೀಜ ಮನ್ಯಾಗೆ ಇಟಗೊಂಡು. ಎಡ್ಡ ವರ್ಷದಿಂದ ಮಳಿ ಇಲ್ಲದಂಗಾಗಿತ್ರಿ. ಮಳಿ ಇಲ್ಲದೆ ಜನ ಪ್ರವಚನಕ್ಕ ಬರೋದು ಕಮ್ಮಿಯಾಗಿತ್ರಿ' ಎಂದು ಚಚ್ಚತೊಡಗಿದರು. ಅಷ್ಟರಲ್ಲಿ ದೇವರೇ ಕಳಿಸಿದಂತೆ ಬಸ್ಸೊಂದು ಬರುವುದು ಕಂಡು ಓಡಿಹೋಗಿ ಹತ್ತಿಕೊಂಡೆ. ಒದ್ದೆತಲೆಯಿಂದ ಹೊರಟ ನೀರು ಕಣ್ಣ ಮೂಲಕ ಹಾದು ಕೋಡಿಬಿದ್ದಂತೆ ತುಟಿಯ ಮೇಲೆ ಇಳಿಯುತ್ತಿತ್ತು. ಅದನ್ನು ಗುಟುಕರಿಸುತ್ತ ಶಾಮಿಯಾನಕ್ಕೆ ಕಿಟಕಿಯಿಂದಲೇ ನಮಸ್ಕಾರ ಮಾಡಿದೆ.

ಮತ್ತೊಂದು ಕಾರ್ಯಕ್ರಮದಲ್ಲಿ ಹೀಗೆ ತಪ್ಪಿಸಿಕೊಂಡು ಬರಲು ಬಸ್ಸು ಸೈತ ಸಿಕ್ಕಿರಲಿಲ್ಲ. ಅದು ನನ್ನ ಸಾರ್ವಜನಿಕ ಭಾಷಣಗಳ ಆರಂಭಕಾಲ. ಯುವಜನೋತ್ಸವದ ಭಾಗವಾಗಿ ವಾರವಿಡೀ ನಡೆದ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಿಸುವುದಿತ್ತು. ಡೊಳ್ಳು ಬಾರಿಸುವ ಸ್ಪರ್ಧೆಯಲ್ಲಿ ಒಳ್ಳೇ ಪ್ರದರ್ಶನ ನೀಡಿದ ತಂಡಕ್ಕೆ ವಂಚಿಸಿ, ದುರ್ಬಲ ತಂಡಕ್ಕೆ ಮೊದಲ ಸ್ಥಾನ ಕೊಡಲಾಗಿತ್ತು. ಸಬಲ ತಂಡದವರು ನನ್ನನ್ನು ಕಂಡು, 'ನೋಡ್ರಿ ಸಾರ್. ನೀವು ಹೊರಗಿಂದ ಬಂದೋರು. ಒಳಗೆ ನಡದಿರೊ ಕಿತಾಪತಿ ನಿಮಗ್ಗೊತ್ತಿಲ್ಲ. ನಮಿಗೇ ಫಸ್ಟ್‌ಪ್ರೈಜ್ ಸಿಗದಿದ್ದರೆ ಚರಗ ಚಲ್ಲೋದೇ ಸೈ' ಎಂದರು. ನನಗೆ ಇದರರ್ಥ ಆಗಲಿಲ್ಲ. ಗ್ರಾಮೀಣ ಪ್ರತಿಭೆಗಳು ಹೇಗೆ ಶ್ರಮಸಂಸ್ಕೃತಿಯ ಭಾಗವಾಗಿ ರೂಪುಗೊಂಡಿವೆ; ಗಜಿಬಿಜಿಯ ನಗರ ಜೀವನದ ಮುಂದೆ ನಮ್ಮ ಹಳ್ಳಿಗಳು ಎಷ್ಟು ಶಾಂತವಾಗಿವೆ ಎಂದು ಭಾಷಣ ಬಿಗಿದೆ. ಬಹುಮಾನ ವಿತರಣೆ ಆರಂಭವಾಯಿತು. ಮೊದಲ ಬಹುಮಾನಕ್ಕೆ 'ದುರ್ಬಲ' ತಂಡದ ಹೆಸರನ್ನು ಘೋಷಿಸಲಾಯಿತು. ಕೂಡಲೇ 'ಸಬಲ' ತಂಡ ವೇದಿಕೆಗೆ ನುಗ್ಗಿ ಪ್ರಶಸ್ತಿ ಸ್ವೀಕರಿಸಲು ಬಂದ ಎದುರಾಳಿಗಳನ್ನು ಬಡಿಯತೊಡಗಿತು. ಅದು ಎರಡು ಊರುಗಳ ನಡುವಣ ಹಳೆಯ ಹಗೆತನ ತೀರುವಳಿಯ ಕಾರ್ಯಕ್ರಮ ಕೂಡ ಆಗಿತ್ತು. ದೂರ ನಿಂತು ನಿರ್ದೇಶನ ಕೊಡುತ್ತಿದ್ದವನು ನನ್ನತ್ತ ಬೆರಳು ಮಾಡಿ 'ಆ ಜುಬ್ಬದವನಿಗೆ ಹಾಕು. ಪ್ರತಿಭೆಯಂತೆ ಪ್ರತಿಭೆ' ಎಂದ. ಅಷ್ಟರಲ್ಲಿ ನನ್ನ